ಬಿಡಬೇಕಲ್ಲ. ಕೊನೆಗೂ ಪತ್ತೆ ಹಚ್ಚಿ ನಕ್ಷತ್ರಿಕರಂತೆ ಬೆನ್ನುಹತ್ತುತ್ತೇವೆ.

ಪಕ್ಷಿಗಳು ಸಹಜವಾಗಿ ತಮ್ಮ ಗೂಡು ನಿರ್ಮಿಸಿಕೊಳ್ಳುವ ಜಾಗವನ್ನು ಮೊದಲು ಸರ್ವೇ ನಡೆಸುತ್ತವೆ. ಅಪಾಯದ ಎಲ್ಲಾ ಆಯಾಮಗಳ ತಾವೇ ಊಹಿಸುತ್ತವೆ. ಮನೆಯ ಸಂರಚನೆಯ ಬಗ್ಗೆ ಅನೇಕ ಸಭೆಗಳನ್ನು ಪರಸ್ಪರ ಗಂಡುಹೆಣ್ಣು ಕೂತು ನಡೆಸುತ್ತವೆ. ಸಿವಿಲ್ ಎಂಜಿನಿಯರಿಂಗ್ ತಂತ್ರಜ್ಞಾನವನ್ನು ಪ್ರಾಯಶಃ ಜಗತ್ತಿಗೆ ಕಲಿಸಿದ ಕಲಿಗಳು ಇವೇ ಇರಬೇಕು. ಅದರಲ್ಲೂ ಗೀಜಗ, ಸ್ವಿಫ್ಟ್, ಹದ್ದುಗಳು, ಬಾರ್ಬೆಟ್, ಮರಕುಟಿಕ ಹಕ್ಕಿಗಳು ಸಾಕಷ್ಟು ಬೆವರುಸುರಿಸಿ ಶ್ರಮಬಿದ್ದು ಮನೆ ಮಾಡುತ್ತವೆ. ಇವು ತಮ್ಮ ಗೂಡು ಕಟ್ಟುವ ಕಲಾತ್ಮಕತೆ ಮತ್ತು ಕೌಶಲದ ಬಗ್ಗೆ ಬರೆಯುತ್ತಾ ಹೋದರೆ ಅದೇ ಒಂದು ಪುರಾಣವಾಗುತ್ತದೆ. ಇದರ ಬಗ್ಗೆ ಹೇಳುತ್ತಾ ಹೋದರೆ ಒಂದು ದೊಡ್ಡ ಕಥೆಯೇ ಆದೀತು.

ಇಲ್ಲಿ ನಾ ನೋಡಿದ ಕಿಂಗ್‌ಫಿಶರ್ ಅಂತಿಮವಾಗಿ ತನ್ನ ಗೂಡು ಪ್ರವೇಶಿಸುವ ಮೊದಲು ಒಂದು ಮಣ್ಣಿನ ದಿಬ್ಬದ ಕೆಳಗೆ ಬಂದು ಕೂರುತ್ತಿತ್ತು. ನಾನು ಆ ಜಾಗದಲ್ಲಿ ಒಂದು ಒಣಗಿದ ಕಡ್ಡಿಯನ್ನು ತಂದು ನೆಟ್ಟೆ. ಕೊನೇ ಪಕ್ಷ ಹಕ್ಕಿ ಕಡ್ಡಿಯ ಮೇಲೆ ಬಂದು ಕೂತರೆ ನಾನು ನೋಡಲು ಸಾಧ್ಯವಿತ್ತು. ಫೋಟೊ ತೆಗೆಯಲು ಕೂಡ ಈ ಲೆವೆಲ್ ಬೇಕಾಗಿತ್ತು. ಹತ್ತಿರದಲ್ಲೇ ಇದ್ದ ಹಸಿರು ಗಿಡಗಳ ಕಿತ್ತು ತಂದು ಸಹಜ ಮರೆ ಮಾಡಿಕೊಂಡು ಕೂತೆ. ನನಗೆ ಒಂದು ವಿಷಯ ಅಚ್ಚರಿ ಎನಿಸಿತು. ಕೆಸರಿನೊಳಗೆ ಗೂಡು ಕಟ್ಟಿ ಅಲ್ಲಿ ಮೊಟ್ಟೆ ಇಡುವ ಈ ಹಕ್ಕಿ ಅದು ಹೇಗೆ ಅಷ್ಟೊಂದು ಶಾಖವನ್ನು ದೇಹದಿಂದ ಉತ್ಪಾದಿಸುತ್ತದೆ? ನೀರಿನ ಹರಿವಿನಂಥ ಥಂಡಿ ಜಾಗದಲ್ಲಿ ಮೊಟ್ಟೆಗಳು ಒಡೆದು ಹೊರಬರಲು ಯಾವ ಪ್ರಮಾಣದ ಉಷ್ಣಾಂಶ ಬೇಕು? ಈ ಪುಟಾಣಿ ಗಾತ್ರದ ಹಕ್ಕಿಯೊಳಗೆ ಇರುವ ವಿದ್ಯುತ್ ಕೇಂದ್ರ ಯಾವ ಬಗೆಯಲ್ಲಿರಬಹುದು? ಯೋಚಿದಷ್ಟೂ ತಲೆ ಧಿಮ್ ಎಂದಿತು.

ನನ್ನ ನಿರೀಕ್ಷೆಯಂತೆ ಅದು ಮೀನು ಹೊತ್ತು ತಂದಿತು. ಹಿಡಿದು ತಂದ ಮೀನನ್ನು ಕೊಂಬೆಗೆ ಗುರಿಯಾಗಿಟ್ಟುಕೊಂಡು ರಪ್ಪೆಂದು ಬಾರಿಸುತ್ತಿತ್ತು. ಮೀನು ಸಂಪೂರ್ಣ ಸತ್ತಿದೆಯೋ ಇಲ್ಲವೋ ಎಂದು ಕೊಕ್ಕಿನಲ್ಲೇ ಹಿಚುಕಿ ನೋಡಿ ಖಾತ್ರಿ ಮಾಡಿಕೊಳ್ಳುತ್ತಿತ್ತು. ಇಷ್ಟೆಲ್ಲಾ ಸರ್ಕಸ್ ಮಾಡುತ್ತಿದೆ ಎಂದರೆ ಅದು ತನ್ನ ಮರಿಗಳಿಗೆ ಕೊಡುವ ಆಹಾರವನ್ನು ತಯಾರಿಸಿಕೊಳ್ಳುತ್ತದೆ ಎಂದೇ ಅರ್ಥ.

ತಾನು ಹಿಡಿದು ತಂದ ಬೇಟೆಯನ್ನು ಮೆದುವಾಗಿ ಮಕ್ಕಳ ಜೀರ್ಣಕ್ಕೆ ಅನುಕೂಲವಾಗುವಂತೆ ತಾಯಿ ಹಕ್ಕಿ ರೆಡಿ ಮಾಡಿಕೊಳ್ಳುವ ವಿಶಿಷ್ಟ ಕ್ರಮವಿದು. ಮಿಂಚುಳ್ಳಿಯ ಮರಿಗಳು ಎಳವೆಯಿದ್ದರೆ ಸಕ್ಕನೆ ನುಂಗಲು ಅನುಕೂಲವಾಗುವಂತಹ ಸಣ್ಣ ಮೀನುಗಳನ್ನು ಬೇಟೆಯಾಡಿ ತರುತ್ತದೆ. ಅದೇ ಕಿಂಗ್ ಫಿಶರ್ ದೊಡ್ಡ ಗಾತ್ರದ ಮೀನು ಹಿಡಿದು ತರುತ್ತಿದೆ ಎಂದರೆ ಅದರ ಮರಿಗಳು ಈಗಾಗಲೇ ಸಾಕಷ್ಟು ಬಲಿತಿವೆ ಎಂದೇ ಭಾವಿಸಬೇಕು. ಕೆಲವೇ ದಿನದಲ್ಲಿ ಹಾರಿ ಇವು ಕೆಸರಗೂಡಿನಿಂದ ಈಚೆಗೆ ಬರುತ್ತವೆ ಎಂಬುದಂತೂ ಸತ್ಯ.

ಕೆಲವು ಸಲ ದೊಡ್ಡ ಗಾತ್ರದ ಮೀನು, ಓತಿಕ್ಯಾತ, ಚೇಳು, ಕಪ್ಪೆಮರಿ, ಹಾವು ರಾಣಿಗಳನ್ನು ಹಿಡಿದು ತರುತ್ತದೆ. ಆಗ ಮರಿಗಳಿಗೆ ಅನುಕೂಲ ಮಾಡಿಕೊಡಲು ಸಿಗಿಸಿಗಿದು ತುತ್ತು ಮಾಡಿ ಕೊಡುತ್ತದೆ. ತನ್ನ ಮಕ್ಕಳಿಗೆ ಎಲ್ಲಾ ಬಗೆಯ ಪ್ರೋಟೀನು ವಿಟಮೀನುಗಳು ಸಿಗಬೇಕೆಂಬ ಕಾರಣಕ್ಕೆ ಆಹಾರದಲ್ಲಿ ವೈವಿಧ್ಯತೆ ಮಾಡುವಷ್ಟು ಬುದ್ಧಿಶಕ್ತಿಯನ್ನು ಪ್ರಕೃತಿ ಇದಕ್ಕೆ ದಯಪಾಲಿಸಿದೆ. ಮಿಂಚುಳ್ಳಿಯ ಕೊಕ್ಕಿನಲ್ಲಿನ ಮೀನಿನ ತಲೆ ಹೊರಕ್ಕೆ ಚಾಚಿಕೊಂಡಿದ್ದರೆ ಅದು ಮರಿಗಳಿಗೆ ಕೊಡುವ ಆಹಾರವೆಂತಲೂ, ಮೀನಿನ ತಲೆ ಮಿಂಚುಳ್ಳಿಯ ಬಾಯೊಳಗಿದ್ದರೆ ಅದು ತಾನೇ ತಿನ್ನಲು ತಂದ ಆಹಾರವೆಂತಲೂ ನಾವು ತಿಳಿಯಬೇಕು.

ಮಿಂಚುಳ್ಳಿಯ ಬೆನ್ನ ಬಿದ್ದು ವಾರಗಟ್ಟಲೆ ನಾನು ಕೆರೆಗೆ ಬಂದು ಕೂರುವುದು ನೋಡಿ ಕೆಲವರು ಮೀನಿಗೆ ಗಾಳ ಹಾಕುವ ಖದೀಮನಿರಬೇಕೆಂದು ಇಣುಕಿದರು. ಕುಂಡಿ ತೊಳೆಯಲು ಬಂದವನಾಗಿದ್ದರೆ ಇಷ್ಟೊತ್ತಿಗೆ ಶಾಸ್ತ್ರ ಮುಗಿಸಿ ಹೊರಟು ಹೋಗಬೇಕಿತ್ತು! ಯಾಕೆ ಇನ್ನೂ ವಕ್ಕರಿಸಿದ್ದಾನೆಂದು ಕೆಲವರು ದೂರದಿಂದಲೇ ಕಣ್ಣನಿಕೆ ಮಾಡಿದರು.

ಕೆರೆಯನ್ನು ಗುತ್ತಿಗೆ ಪಡೆದು, ಮೀನಿನ ಮರಿ ಬಿಟ್ಟ ವಾರಸುದಾರ ಒಂದು ದಿನ ಮೀನು ಕಳ್ಳ ನಾನೆಂದು ಭಾವಿಸಿ ಬೈಯಲು ದುರುದುರನೆ ಓಡಿ ಬಂದ. ಮರೆ ಮಾಡಿಕೊಂಡು ಕೂತಿದ್ದ ನಾನು ಕಳ್ಳನ ಭಂಗಿಯಲ್ಲೇ ಇದ್ದೆ. ಅದೇನು ಕೆಟ್ಟಬೈಗುಳಗಳ ಹೊತ್ತು